*ಕರ್ನಾಟಕ ಲೋಕಾಯುಕ್ತ*

ಸಂ.ಕಂಪ್ಲೇಂಟ್.ಉಪಲೋಕ್.ಜಿ.ಎಲ್.ಬಿ–2814/2014/ಡಿಆರ್ಇ–5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ:4.4.2017.

*ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ*

ವಿಷಯ: ಡಾ॥ ಅಶೋಕ್, ಸಹಾಯಕ ಆಯುಕ್ತರು, ಹೊಸಪೇಟ್ ಬಳ್ಳಾರಿ ಜಿಲ್ಲೆ ಇವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು.

****

ಈ ದೂರನ್ನು ಡಾ॥ ಜಿ.ಪಾಪಯ್ಯ ತಂದೆ ಜಿ.ಸೂರಯ್ಯ, ಕಮಲಾಪುರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ( ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಡಾ॥ ಅಶೋಕ್, ಸಹಾಯಕ ಆಯುಕ್ತರು, ಹೊಸಪೇಟ್ ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.

2. ದೂರುದಾರರು ತಮ್ಮ ದೂರಿನಲ್ಲಿ –ಎಸ್.ಟಿ ಜನಾಂಗಕ್ಕೆ ಸೇರಿದ ಭೂಮಿಯನ್ನು ಮಾರಾಟ ಮಾಡಲು ಎದುರುದಾರರ ಅನುಮತಿ ಪಡೆಯಲು ಕನಿಷ್ಟ 2–3 ತಿಂಗಳು ಬೇಕಾಗುತ್ತದೆ ಆದರೆ ಚಿದಂಬರ ಎಂಬ ಇಬ್ಬರು ವ್ಯಕ್ತಿಗಳಿಂದ 20,000/– ರೂಗಳನ್ನು ತೆಗೆದುಕೊಂಡು ಎದುರುದಾರರು ಕಾನೂನು ಬಾಹೀರವಾಗಿ ಪರವಾನಗಿ ಪಡೆದುಕೊಂಡಿರುತ್ತಾರೆಂದು ಆಪಾದಿಸಿರುತ್ತಾರೆ.

3) ಈ ದೂರಿನ ತನಿಖೆಗೆ ತೆಗೆದುಕೊಂಡು ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಿಗೆ ಭೂ ನ್ಯಾಯ ಮಂಡಲಿ ನಂ: 2 ಹೊಸಪೇಟ್ ಇವರಿಂದ ಸ. ನಂ: 605 ವಿಸ್ತೀರ್ಣ 4ಎ., 21ಗು.,ಯ ಅಧಿಬೋಗದಾರನೆಂದು ತೀರ್ಮಾನಿಸಿರುತ್ತಾರೆ. ದೂರುದಾರರಿಂದ ಪ್ರೀಮಿಯಂ ಹಣ ತೆಗೆದುಕೊಂಡು ಹಕ್ಕು ಪತ್ರ ನೀಡಲಾಗಿದೆ. ಇವರ ಅನುಬೋಗದಲ್ಲಿ ಮೇಲ್ಕಂಡ ಜಮೀನು

ಬಂದು 3 ವರ್ಷಗಳಾಗಿದೆ. ದಿ: 22.10.1981ರಲ್ಲಿ ಅವಾರ್ಡ್ ಸಹ ಆಗಿದೆ. ಸ್ವಂತ ಮನೆ ಖರ್ಚಿನ ಸಲುವಾಗಿ ಭೂಮಿ ಮಾರಾಟ ಮಾಡಲು ಫಾರಂ ನಂ:2 ಅನ್ನು ಕೊಟ್ಟಿರುವುದರಿಂದ 4.12.2012ರಂದು ಅರ್ಜಿ ಸಲ್ಲಿಸಿದ್ದಾರೆ. ಪರಭಾರೆ ನಿಷೇದದ ಅವಧಿ ಮುಗಿದಿದ್ದು ದೂರುದಾರರು ಆರ್ಥಿಕ ಸಂಕಷ್ಟದಲ್ಲಿದ್ದುದ್ದರಿಂದ 5.12.12ರಂದು ಮಾರಾಟ ಮಾಡಲು ಪರವಾನಗಿ ಕೊಡಲಾಗಿದೆ. ಇದರಲ್ಲಿ ಯಾವುದೇ ಲೋಪದೋಷಗಳಾಗಿಲ್ಲ ತಾವು ಎನ್.ಓ.ಸಿ ನೀಡಿರುವುದರಲ್ಲಿ ಯಾವುದೇ ತಪ್ಪು ಆಗಿಲ್ಲ ಜಮೀನು ಕೊಂಡುಕೊಳ್ಳುವವರಿಂದ ಸುಮಾರು 60ಲಕ್ಷ ರೂಗಳ ಮೇಲ್ಪಟ್ಟು ಹಣ ತೆಗೆದುಕೊಂಡ ನಂತರ ವ್ಯವಹಾರದಲ್ಲಿ ಅವರಿಗೆ ಮನಸ್ತಾಪ ಬಂದಿದ್ದರಿಂದ ಸತ್ಯಕ್ಕೆ ದೂರವಾದ ಆರೋಪಣೆ ಮಾಡಿದ್ದಾರೆ. ಆದ್ದರಿಂದ ದೂರುದಾರರು ದೂರನ್ನು ವಜಾ ಮಾಡುವಂತೆ ಕೋರಿಕೊಂಡಿದ್ದಾರೆ. ಒಂದು ವೇಳೆ ದೂರುದಾರರಿಗೆ ಎನ್.ಓ.ಸಿ ಪಡೆಯುವ ಇಚ್ಚೆಇಲ್ಲದಿದ್ದಲ್ಲಿ ಅದನ್ನು ನಮ್ಮ ಕಛೇರಿಯಿಂದ ಏಕೆ ಪಡೆದುಕೊಂಡು ಹೋಗಿದ್ದಾರೆಂದು ಪ್ರಶ್ನಿಸಿದ್ದಾರೆ.

4) ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಸದರಿ ಪ್ರತ್ಯುತ್ತರದಲ್ಲಿ ಸಮೀ ಉಲ್ಲಾ ಎನ್ನುವವರು ದೌರ್ಜನ್ಯದಿಂದ ಕಳುಹಿಸಿ ಚಿದಾನಂದ ಮತ್ತು ಚಿದಂಬರ ಎನ್ನುವವರ ಮುಖಾಂತರ ಎದುರುದಾರರನ್ನು ಸಂಪರ್ಕಿಸಿ ನಾಳೆ ಮದ್ಯಾಹ್ನದೊಳಗೆ ನಿಮ್ಮ ಕೆಲಸ ಮಾಡಿಕೊಡುತ್ತೇನೆಂದು ಮರು ದಿನ 4-00 ಗಂಟೆಗೆ ಸಮೀ ಉಲ್ಲಾ ರವರು ಕರೆ ಮಾಡಿದಾಗ ಎ.ಸಿ., ಅವರು ಕಛೇರಿಗೆ ಬಂದು ಎನ್.ಓ.ಸಿ ಕೊಟ್ಟರು 5-10ಗಂಟೆಗೆ ನನ್ನನ್ನು ಉಪ ನೊಂದಣಿ ಅಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ಸರದಿಯಲ್ಲಿದ್ದ ಕೇಸುಗಳನ್ನು ಬದಿಗಿಟ್ಟು ಮಾರಾಟ ಪತ್ರ ಮಾಡಿಸಲಾಗಿದೆ. ಸಮಾನ್ಯ ಮನುಷ್ಯರು ಇದ್ದಲ್ಲಿ 24 ತಾಸುಗಳನ್ನು ಎನ್.ಓ.ಸಿ ಕೊಡುತ್ತಾರೆಯೇ ಸಮೀ ಉಲ್ಲಾ ರವರು ಎಂ.ಎಲ್.ಎ ರವರ ಆತ್ಮೀಯ ಸ್ನೇಹಿತ ಇತ್ಯಾದಿಯಾಗಿ ಖಾಸಗಿ ವ್ಯಕ್ತಿಗಳ ಮೇಲೆ ಸಾಕಷ್ಟು ಆಪಾದನೆಗಳನ್ನು ಮಾಡಿದ್ದಾರೆ.

5) ಈ ಪ್ರಕರಣವನ್ನು ಎಸ್.ಪಿ. ಕೆಎಲ್ಎ ಬಳ್ಳಾರಿ ರವರಿಗೆ ವಹಿಸಲಾಗಿದೆ. ಎಸ್.ಪಿ ರವರು ತಮ್ಮ ವರದಿಯಲ್ಲಿ ಅರ್ಜಿದಾರರು ವಿಚಾರಣೆಯ ಸಮಯದಲ್ಲಿ ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲ ಹಾಗೂ ವಿಚಾರಣೆಯ ಸಮಯದಲ್ಲೂ ಸಹ ಯಾವುದೇ ಪೂರಕ ಸಾಕ್ಷ್ಯಾಧಾರಗಳು ದೊರೆತಿಲ್ಲ 2012ರಲ್ಲಿಯೇ ದೂರುದಾರರು ಸಮಿರೀನ್ ಬಾನು

ಎನ್ನುವವರಿಗೆ ಜಮೀನು ಕ್ರಯಕ್ಕೆ ಕೊಟ್ಟಿದ್ದರು ಖಾಸಗಿ ವ್ಯಕ್ತಿಗಳ ವಿರುದ್ಧ ಇರುವ ದ್ವೇಷವನ್ನು ಸರ್ಕಾರಿ ಅಧಿಕಾರಿಗಳ ಮೇಲೆ ತೀರಿಸಿಕೊಳ್ಳುತ್ತಿದ್ದಾರೆ. ಜಮೀನು ಮಾರಾಟ ಮಾಡುವ ಅನುಮತಿ ನೀಡುವುದು ಸಹಾಯಕ ಆಯುಕ್ತರ ವಿವೇಚನೆಗೆ ಬಿಟ್ಟಿದ್ದು ಒಂದು ದಿನದಲ್ಲಿ ಅನುಮತಿ ಕೊಟ್ಟಿರುವುದು ಕಾನೂನು ಬಾಹಿರವಲ್ಲ ಆದ್ದರಿಂದ ದೂರನ್ನು ಮುಕ್ತಾಯಗೊಳಿಸುವಂತೆ ಕೋರಿಕೊಂಡಿದ್ದಾರೆ.

6) ಈ ವರದಿಯ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ ಬಸಪ್ಪಗುರಲಿ ಎನ್ನುವ ಪಿ.ಐ ರವರು ನನನ್ನು ವಿಚಾರಣೆ ಮಾಡಿಲ್ಲ ಅಂತ ಆಣೆ ಮಾಡುತ್ತೇನೆ. ಹಿಮಾಗ್ನಿಯ ಪತ್ರಿಕೆಯಲ್ಲಿ ಬಂದ ವರದಿಯೇ ಸಾಕ್ಷಿ 34 ಲಕ್ಷ ರೂಗಳಿಗೆ ಕ್ರಯವಾಗಿದ್ದು 9,60000/-ಕ್ಕೆ ನೊಂದಣಿ ಮಾಡಿಸಿ ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ. 24 ಗಂಟೆಗಳಲ್ಲಿ ಎಷ್ಟು ಜನರಿಗೆ ಪರವಾನಗಿ ಕೊಟ್ಟಿದ್ದಾರೆ ಎನ್ನುವ ಬಗ್ಗೆ ತನಿಖೆಯಾಗಿಲ್ಲ ಬೇಗನೆ ರಿಜಿಸ್ಟರ್ ಮಾಡಿಕೊಡಲು ಉಪ ನೊಂದಣಾಧಿಕಾರಿಗಳು ಲಂಚ ತೆಗೆದುಕೊಂಡಿದ್ದಾರೆ. ಸಮಿ ಉಲ್ಲಾ ಮತ್ತು ಆತನ ಸಹಾಯಕರು ಗ್ರಾಮ ಲೆಕ್ಕಾಧಿಕಾರಿ, ಸಹಾಯಕ ಆಯುಕ್ತರು ಮತ್ತು ಉಪ ನೊಂದಣಾಧಿಕಾರಿಗಳು ನನಗೆ ಮೋಸ ಮಾಡಿದ್ದಾರೆ.

7) ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ತಾವು ಸುತ್ತೋಲೆಗಳ ಪ್ರಕಾರ ಕರ್ತವ್ಯನಿರ್ವಹಿಸುತ್ತಿರುವುದಾಗಿ ಹೇಳಿರುತ್ತಾರೆ. ಸರ್ಕಾರಿ ಸುತ್ತೋಲೆಗಳಲ್ಲಿ ಇಷ್ಟೇ ದಿನಗಳಲ್ಲಿ ಅರ್ಜಿಯನ್ನು ವಿಲೇ ಮಾಡುವ ಬಗ್ಗೆ ಯಾವುದೇ ನಿಯಮಗಳು ಇಲ್ಲ ಕೆಲವು ಇನಾಂ ರದ್ದತಿ ಕಾಯಿದೆ ಅಡಿಯಲ್ಲಿ ಮರು ಮಂಜೂರಾಗಿರುವ ಜಮೀನುಗಳಿಗೆ ಕೆ.ಪಿ.ಟಿ.ಸಿ.ಎಲ್. ಕಾಯಿದೆ ಅನ್ವಯಿಸುವುದಿಲ್ಲ ಎನ್ನುವುದು ಎದುರುದಾರರು ಹಾಜರುಪಡಿಸಿರುವ ಸುತ್ತೋಲೆಗಳಿಂದ ಸ್ಪಷ್ಟವಾಗುತ್ತದೆ. ದೂರುದಾರರು ಒಂದು ವೇಳೆ ತಾವು ಜಮೀನು ಮಾರಾಟ ಮಾಡಲು ಭೂ ಕಂದಾಯದ 20 ಪಟ್ಟು ಹಣವನ್ನು ಪಾವತಿಸಿಲ್ಲ ಅಂತ ವಿವಾದ ಮಾಡುವುದಾದರೆ 25.1.2014ರ ವರೆಗೆ ಸುಮ್ಮನಿದ್ದು ಅಂದಿನ ದಿನ ವಿವರಗಳನ್ನು ಕೇಳಿದ್ದಾರೆ. ದೂರುದಾರರಿಗೆ ಫಾರಂ ನಂ:2ಅನ್ನು ದಿ: 18.8.82ರಂದು ಕೊಡಲಾಗಿದೆ. ಪತ್ರಿಕೆಯಲ್ಲಿ ಬಂದಿರುವ ವರದಿಗಳು ಸಾಕ್ಷಿ ಅಥವಾ ಆಧಾರಗಳು ಆಗುವುದಿಲ್ಲ ಪತ್ರಿಕೆಯ ವರದಿಗಾರರು ವಿಶೇಷವಾಗಿ ನೇಮಕವಾಗಿದ್ದಾಗ ಅವರ ಸಾಕ್ಷಿ ತೆಗೆದುಕೊಳ್ಳಬಹುದು

**8) Karntaka Certain Inams Abolition Act ಅಡಿಯಲ್ಲಿ**

Payment of premium, etc.- (1) The right of an inamdar or other person to be registered as an occupant under this Act shall be subject to the payment by him to the State Government of a premium as specified below:- (i) an inamdar: six times the land revenue of the lands to be registered; (ii) other persons referred to in section 5 : one hundred times the land revenue of the lands to be registered.

(2) The said right shall also be subject to the further conditions that the land registered shall not be alienated in any manner or partitioned except with the previous sanction of the Deputy Commissioner and on payment of an amount equal to twenty times the land revenue of the lands concerned, which shall be in addition to the amount already paid as premium: 3 [Provided that such sanction shall not be necessary for an inamdar including the holder of a minor inam to alienate the land of which he is registered as an occupant in an enfranchised inam.]

9) ದಿ: 14.1.82ರಂದು ದೂರುದಾರರಿಗೆ ಫಾರಂ ನಂ: 2ಅನ್ನು ಕೊಡುವಾಗ 20 ಪಟ್ಟು ಭೂ ಕಂದಾಯವನ್ನು ಪಾವತಿಸಿದ ನಂತರ ಮತ್ತು ಸರ್ಕಾರದ ಪರವಾನಗಿ ಪಡೆದುಕೊಂಡ ನಂತರ ಮಾತ್ರ ಮಾರಾಟ ಮಾಡಬಹುದು ಅಂತ 2ನೇ ಷರತ್ತು ಇದ್ದು ತಹಶೀಲ್ದಾರ್ ರವರು ಹೊಸಪೇಟೆ ಇವರು ಕೊಟ್ಟಿರುವ ತಿಳುವಳಿಕೆ ಪತ್ರ ದಿ: 25.1.2014ರ ಪ್ರಕಾರ ಹಣ ಪಾವತಿಸಿದ ರಶೀದಿಯ ಬಗ್ಗೆ ಯಾವುದೇ ಚಲನ್ ಲಭ್ಯವಿರುವುದಿಲ್ಲ ಹೀಗಿರುವಾಗ ಎದುರುದಾರರು ಭೂ ಕಂದಾಯದ 20 ಪಟ್ಟು ಹಣವನ್ನು ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವ ಬಗ್ಗೆ ಯಾವುದೇ ಗಮನ ಕೊಡದೆ 5.12.2012ರಂದು ಮಾರಾಟ ಮಾಡಲು ಪರವಾನಗಿ ಕೊಟ್ಟಿರುವ ಅನುಮತಿಯು ಕಾನೂನು ಬದ್ಧವಾಗಿಲ್ಲ ಇದಲ್ಲದೆ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಹೇಳಿರುವಂತೆ ಜೇಷ್ಠತೆಯ ಆಧಾರದ ಮೇಲೆ ಬೇರೆಯಾವ ಅರ್ಜಿಗಳನ್ನು ಇದೇ ರೀತಿಯಾಗಿ ವಿಲೇಗೊಳಿಸಿದ್ದಾರೆ ಎನ್ನುವುದನ್ನು ತೋರಿಸಲು

ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆದ್ದರಿಂದ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ. ಎನ್ನಲು ಸಾಕಷ್ಟು ಆಧಾರಗಳು ಇವೆ.

10). ಆದುದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 4/4/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.